# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 195 (1534) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ\|\| ತಳವಾರ್ ಸಾಬಣ್ಣ<br>(ನಾಮನಿರ್ದೇಶಿತರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 21.03.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿರುವ ಸಿಮೆಂಟ್ ಕಂಪನಿ ಉತ್ಪಾದನೆ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು; | Banks and Financial Institutions Act, 1993 ಅನ್ವಯ Recovery of debts ನಿಂದ 1997 ರಲ್ಲಿ Shahabad Cement Works (HMP Cements Ltd.) ಘಟಕದ ಉತ್ಪಾದನೆ ಸ್ಥಗಿತಗೊಂಡಿರುತ್ತದೆ. |
| ಆ | ಶಹಾಬಾದ ಸಿಮೆಂಟ್ ಕಂಪನಿ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾಗಿದ್ದು ಎಸಿಸಿ ಒಡೆತನಕ್ಕೆ ಸೇರಿದ್ದಾಗಿದ್ದು, 7 ದಶಕಗಳ ಕಾಲ ಶಹಾಬಾದ/ಸುತ್ತ ಮುತ್ತಲಿನ ಗ್ರಾಮಗಳಲ್ಲಿನ ಕಾರ್ಮಿಕರಿಗೆ ಉದ್ಯೋಗ ನೀಡಿದ ಕಂಪನಿ 1997ರಿಂದ ಉತ್ಪಾದನೆ ಸ್ಥಗಿತಗೊಳಿಸಿ ಕಾರ್ಮಿಕರನ್ನು ಬೀದಿಪಾಲಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತದನಂತರ, Jaypee Cement Corporation Ltd. (Zawar Cements) ಈ ಘಟಕವನ್ನು DRT ಹರಾಜು ಮೂಲಕ ಖರೀದಿಸಿದ್ದು, 2015 ರಲ್ಲಿ ಉತ್ಪಾದನೆ ಪ್ರಾರಂಭಿಸಿ, ಪುನಃ ಕಾರ್ಯಸಾಧ್ಯತೆಯಿಲ್ಲದ ಮತ್ತು ಮಾರುಕಟ್ಟೆ ಹಿಂಜರಿತದಿಂದ 2016 ನೇ ಸಾಲಿನಲ್ಲಿ ಘಟಕದ ಉತ್ಪಾದನೆ ಸ್ಥಗಿತಗೊಂಡಿರುತ್ತದೆ.<br><br>ಘಟಕದ ಉತ್ಪಾದನೆ ಸ್ಥಗಿತಗೊಂಡಿದ್ದರಿಂದ ಕಾರ್ಮಿಕರಿಗೆ ಉದ್ಯೋಗವಿಲ್ಲದಂತಾಗಿರುತ್ತದೆ.<br><br>ಘಟಕದವರು ತಿಳಿಸಿದಂತೆ, DRT ಆದೇಶದನ್ವಯ, 1997 ರಲ್ಲಿ 858 ಉದ್ಯೋಗಿಗಳಿದ್ದರು ಮತ್ತು 2007 ರಲ್ಲಿ ಎಲ್ಲಾ ಅರ್ಹ ಉದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗಿತ್ತು ಹಾಗೂ ಯಾವುದೇ ಉದ್ಯೋಗಿಗಳನ್ನು ಕೆಲಸದಿಂದ ತೆಗೆದು ಹಾಕಿರುವುದಿಲ್ಲ.<br><br>ಪ್ರಸ್ತುತ, ಶೇ. 90 ಉದ್ಯೋಗಿಗಳು 60 ವರ್ಷ ಪೂರೈಸಿದ ಕಾರಣ ಈಗಾಗಲೇ ಸೇವೆಯಿಂದ ನಿವೃತ್ತರಾಗಿರುತ್ತಾರೆ.<br><br>ಈಗ ಸದರಿ ಕಂಪನಿಯಲ್ಲಿ 28 ಖಾಯಂ ಉದ್ಯೋಗಿಗಳು ಮತ್ತು 43 ಜನರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಕಂಪನಿಯಿಂದ ನಿಯಮಾನುಸಾರ ಪಾವತಿಸಲಾಗುತ್ತಿದೆ. |
| ಇ | ಸ್ವಾತಂತ್ರ್ಯ ಪೂರ್ವದಿಂದ 1990ರ ವರೆಗೆ ಎಸಿಸಿ, 1990 ರಿಂದ 1997ರ ವರೆಗೆ ಎಚ್‌ಎಂಪಿ ನಂತರ ಜೆ.ಪಿ ಒಡೆತನದಲ್ಲಿ ಕಂಪನಿ ಮಾಲೀಕತ್ವ ಬದಲಾವಣೆಯಾಗಿದ್ದು ಕಾರ್ಮಿಕರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವುದನ್ನು ನಿಯಂತ್ರಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕಂಪನಿ ಮಾಲೀಕತ್ವ ಬದಲಾವಣೆ ಪ್ರಕ್ರಿಯೆಯು ಲಾಭ-ನಷ್ಟದ ಪ್ರಕಾರ ಸಾಮಾನ್ಯವಾಗಿರುತ್ತದೆ. |

| | | |
|---|---|---|
| ಈ | ದೇಶದಲ್ಲಿಯೇ ಹಳೆಯದಾದ ಕಂಪನಿ ವಿಸ್ತಾರವಾದ ಸ್ಥಳ ಮತ್ತು ಗುಣಮಟ್ಟದ ಸುಣ್ಣದ ಕಲ್ಲಿನ ಸಂಪನ್ಮೂಲ ಹೊಂದಿದ ಈ ಕಂಪನಿಗೆ ಸರ್ಕಾರವು ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಿ ಕಾರ್ಮಿಕರ ಬದುಕಿಗೆ ಆಸರೆಯಾಗಲು ತಕ್ಷಣವೇ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು? | ಜೆ.ಪಿ ಸಿಮೆಂಟ್ ಲಿ., ಕಂಪನಿಯು ಆದೇಶ ಸಂಖ್ಯೆ CP (IB) No.26/ALD/2023 ರ IA No.583/2023, ದಿನಾಂಕ 22.07.2024 ರನ್ವಯ National Company Law Tribunal (NCLT) ವ್ಯಾಜ್ಯದಲ್ಲಿರುತ್ತದೆ. |

**ಸಿಐ 120 ಎಸ್‌ಪಿಐ 2025**

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು